ನಡುವೆ ಎಚ್ಚರವಾಗಿರುತ್ತದೆ. ಇದರಲ್ಲಿ ಅಸ್ಪೃಶ್ಯರನ್ನು ಬಹಳ ಸುಲಭವಾಗಿ ಬೇಟೆ ಆಡಬಹುದು. ಭಾರತೀಯ ಮನಸ್ಸು ಜಾತಿಗಳಿಂದಾಗಿ ಸದಾ ಗಾಯಗೊಂಡು ವ್ಯಗ್ರವಾಗಿರುತ್ತದೆ. ಕಿಲ್ಲಿಂಗ್ ಇನ್‌ಸ್ಟಿಂಕ್ಟ್ ಈಗ ಹೆಚ್ಚಾಗಿದೆ. ಇಂಥಲ್ಲಿ ಅಪಮಾನ, ವಿಷಾದ, ಸಂಬಂಧ, ಮನುಷ್ಯತ್ವ, ಸಹನೆ ಮುಂತಾದವುಗಳನ್ನೆಲ್ಲ ಹಿಂದುತ್ವದ ಜಾತಿ ವ್ಯವಸ್ಥೆ ನುಂಗಿಬಿಟ್ಟಿದೆ. ಮನುಷ್ಯರ ಕೇಡಿನ ಮೂಲ ಮಾಯಾವಿ. ಅದು ಕಂಡಂತೆ ಕಂಡು ಕಣ್ಮರೆಯಾಗಿಬಿಡುತ್ತದೆ. ನನ್ನ ಕಥೆಗಳಲ್ಲಿ ಕ್ರೌರ್ಯ, ಹಿಂಸೆ, ನೈಜತೆ, ಅಸಹಾಯಕತೆ, ಭಗ್ನತೆ, ತಬ್ಬಲಿತನ ಒಟ್ಟೊಟ್ಟಿಗೆ ಬರುತ್ತವೆ. ಅಲ್ಬರ್ಟ್ ಕಾಮೂ ಮತ್ತು ಕಾಫ್ಕಾ ಅವರಿಗೆ ಕಂಡಂತಹ ಹಿಂಸೆಯ ದರ್ಶನ ನನಗೂ ಕಂಡಿದೆ. ಅವರು ಯುರೋಪಿನ ಸಮಾಜದ ಅನಾಥಪ್ರಜ್ಞೆಯ ದುರಂತವನ್ನು ಅನುಭವಿಸಿ ಬರೆದರು. ನನ್ನ ಊರುಕೇರಿಯ ನಮ್ಮ ಜನಗಳ ಬಿರುಕುಗೊಂಡ ವ್ಯಕ್ತಿತ್ವಗಳು ನಡೆಸುತ್ತಿದ್ದ ಕ್ರೌರ್ಯ ಬಹಳ ಹಿಂಸಾತ್ಮಕವಾಗಿತ್ತು. ನನ್ನ ತಂದೆಯೇ ನನ್ನನ್ನು ಕೊಲ್ಲಲು ಹತ್ತಾರು ಬಾರಿ ಯತ್ನಿಸಿ ವಿಫಲನಾಗಿದ್ದ. ಆದರೆ ನನ್ನ ತಾಯಿಯನ್ನು ಕೊಂದು ಮತ್ತೊಬ್ಬಳ ಜೊತೆ ಕೂಡಾವಳಿ ಮಾಡಿಕೊಂಡ. ಕೊನೆಗೆ ಅವಳನ್ನೂ ಸಾಯಿಸಿದ. ಕೊನೆಗೆ ಮೂರನೆಯವಳ ಕರೆ ತಂದು ಮನೆಯಲ್ಲಿ ಕೂಡಿಹಾಕಿ ನರಮೇಧದ ವಾತಾವರಣ ಸೃಷ್ಟಿಸಿದ್ದ. ಆಕೆ ಕದ್ದು ಮನೆ ಬಿಟ್ಟು ಹೋಗಿ ಎಲ್ಲೋ ಸೇರಿ ಸತ್ತುಹೋದಳು. ಇವನ್ನೆಲ್ಲಾ ಕಣ್ಣಾರೆ ಕಂಡ ನನಗೆ ದುಃಖದ ಮೂಲ ಹುಡುಕುವ ಬದಲು ಕ್ರೌರ್ಯದ ಬೇರುಗಳನ್ನು ನನ್ನ ಭಾಷೆಯಲ್ಲಿ ಹುಡುಕಬೇಕು ಎನಿಸಿತು. ಈ ಬೇರುಗಳು ನನಗೆ ಇನ್ನೂ ಸಿಕ್ಕಿಲ್ಲ. ಮಾನವ ವಿಕಾಸದ ಉದ್ದಕ್ಕೂ ಪುರುಷ ತನ್ನೊಳಗಿನ ಕಗ್ಗೊಲೆಯ ಗುಣವನ್ನು ಉಪಾಯವಾಗಿ ಕದ್ದುಮುಚ್ಚಿ ಪಳಗಿಸಿಕೊಂಡು ಬಂದಿದ್ದಾನೆ. ನೆನೆದರೆ ನನಗೆ ಏನೇನೊ ನೆನಪಾಗಿ ಸತ್ತಂತಾಗಿ ಬಿಡುವೆ.

**◆ ಲೇಖಕರು ತಮ್ಮ ಬರಹದಲ್ಲಿ ಕ್ರೌರ್ಯವನ್ನು ಎದುರಿಸಲು ಅಥವಾ ಕ್ರೌರ್ಯದಿಂದ ಪಾರಾಗಲು ಹಲವು ತಂತ್ರಗಳನ್ನು ಬಳಸುತ್ತಾರೆ. ನೀವು ನಿಮ್ಮ ಕಥೆ ಹಾಗೂ ಕಾದಂಬರಿಗಳಲ್ಲಿ ಕ್ರೌರ್ಯವನ್ನು ಕಟ್ಟಿಹಾಕಲು ಯಾವ ದಾರಿಗಳನ್ನು ಕಂಡು ಕೊಂಡಿರಿ?**

ಕ್ರೌರ್ಯವನ್ನು ಮಣಿಸುವುದೇ ಭಾಷೆ. ಆದರೆ ಭಾರತದಲ್ಲಿ ಭಾಷೆಗೂ ಒಂದು ಮನೋವಿಜ್ಞಾನವಿದೆ. ಹಾಗೆ ನೋಡಿದರೆ ಭಾಷೆ ಮತ್ತು ಮನಸ್ಸು ಬೇರೆ ಬೇರೆ ಅಲ್ಲ. ಹಿಟ್ಲರ್ ಭಾಷೆಯ ಮೂಲಕ ಹಿಂಸೆಯನ್ನು ಹರಡಿದ, ಕೊನೆಗೆ ಹಿಂಸೆಯಿಂದಲೇ ಸತ್ತ. ಭಾರತೀಯ ಭಾಷೆಯ ಮನಸ್ಸುಗಳು ಒಡೆದು ನೂರೆಂಟು ಛಿದ್ರಾವತಾರ ತಾಳಿವೆ. ಆದ್ದರಿಂದಲೇ ಭಗ್ನತೆ, ವಿಕೃತಿ ನಮ್ಮ ನಮ್ಮ ಭಾಷೆಗಳಲ್ಲಿ ಅಂದರೆ ಸುಪ್ತಪ್ರಜ್ಞೆಯಲ್ಲಿ ಬಹಳ ಕ್ರಿಯಾಶೀಲವಾಗಿವೆ. ನನಗೇ ಗೊತ್ತಿಲ್ಲದೆ ವಿನಾಕಾರಣ ಹಿಂಸೆ ನುಗ್ಗಿ ಬಂದಿರುವ ಸಾಕಷ್ಟು ಉದಾಹರಣೆಗಳಿವೆ. ನಮ್ಮಪ್ಪ ಅಮಾಯಕರ ಬೇಟೆ ಆಡುತ್ತಿದ್ದ. ದುರ್ಬಲರ ಮೇಲೆ ದಾಳಿ ಮಾಡುತ್ತಿದ್ದ. ಇದರ ಪರಿಣಾಮವಾಗಿ ನನ್ನ ನಿಯಂತ್ರಣ ಮೀರಿ ಆ ಕಥನದ ಸಂದರ್ಭಕ್ಕೆ ಅಷ್ಟು ಬೇಡವಾಗಿದ್ದರೂ ಹಿಂಸೆ ಮೀಸೆ ತಿರುವಿದಂತೆ ಬಂದುಬಿಡುತ್ತದೆ. ಈ ಹಿಂಸೆಯನ್ನು ತಡೆಯುವುದಕ್ಕಾಗಿಯೇ ನಾನು ರಮ್ಯ ಕಾವ್ಯಾತ್ಮಕ ಭಾಷೆಯನ್ನು ಅವಲಂಬಿಸಿದೆ. ಭಾಷೆಗೆ ವಾತ್ಸಲ್ಯ ಕಾರುಣ್ಯ ಮಮಕಾರ ಹೇರಳವಾಗಿದೆ. ಭಾಷೆಗೆ ಹೆಣ್ಣಿನ ಗುಣಗಳೇ ಹೆಚ್ಚು. ನಾನು ತಾಯ್ತನದ ಕರುಳ ಭಾಷೆಯ ಜಾಡನ್ನು ಹುಡುಕಿಕೊಂಡೆ. ಸಂಗೀತದ ಲಯ ನಾದ ಸ್ವರಗಳ ಕಂಡುಕೊಂಡೆ. ನನ್ನ ಹಟ್ಟಿಯ ಗ್ರಾಮೀಣ ನುಡಿಗಳನ್ನು ಕೊಂಚ ಪರಿಷ್ಕರಿಸಿಕೊಂಡೆ. ಭಾಷೆಯಲ್ಲಿ ಅಡಗಿಕೊಳ್ಳಲು ತುಂಬಾ ದಾರಿಗಳಿವೆ. ಪ್ರಾಚೀನ ಕವಿಗಳಿಂದ ಹಿಡಿದು ಮಧ್ಯಕಾಲೀನ ಭಾಷಿಕ ಪಯಣವನ್ನು ಗಮನಿಸಿ. ಎಲ್ಲಾ ಮಹತ್ವದ ಲೇಖಕರು ಭಾಷೆಯನ್ನು ಕೇವಲ ವಾಹಕವಾಗಿ ಬಳಸಿಲ್ಲ. ಅವರೆಲ್ಲ ಭಾಷೆಯ ಪ್ರಾಣದಿಂದ ತಮ್ಮ ಕಾಲದ ಸಾಹಿತ್ಯಿಕ ಸಂಬಂಧಗಳನ್ನು ನಿರ್ವಹಿಸಿದ್ದಾರೆ. ಕೊನೆಗೂ ಲೇಖಕರ ಸೃಜನಶೀಲತೆಯ ಪ್ರಾಣವೇ ಭಾಷೆ. ಯಾವ ಲೇಖಕರು ಭಾಷೆಯ ಪ್ರಾಣವನ್ನು ಉಸಿರಾಡಿ ಬರೆಯುತ್ತಾರೊ ಅಂತಹ ಲೇಖಕರು ಬಹಳ ಕಾಲ ಜೀವಂತವಾಗಿರುತ್ತಾರೆ.

**◆ ನಿಮ್ಮ ಆರಂಭದ 'ಬುಗುರಿ'ಕಥೆಯಲ್ಲಿನ ಕಥೆಗಳಿಗೆ ಹೋಲಿಸಿದರೆ ನಂತರದ ನಿಮ್ಮ ಅನೇಕ ಕಥೆಗಳಲ್ಲಿ ಕಥೆಗೂ ಪ್ರಬಂಧಕ್ಕೂ**